# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1985 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 24.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

*****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಎಪಿಎಂಸಿ ಮಾರುಕಟ್ಟೆಗೆ ಜಾಗದ ಕೊರತೆ ಉಂಟಾಗಿ ವರ್ಷದಿಂದ ವರ್ಷಕ್ಕೆ ಸಮಸ್ಯೆಗಳ ಪಟ್ಟಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕಾಲಮಿತಿಯೊಳಗೆ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು ಹಾಗೂ ಸದರಿ ಮಾರುಕಟ್ಟೆಗೆ ಯಾವ ಕಾಲ ಮಿತಿಯೊಳಗೆ ಜಾಗವನ್ನು ಗುರುತಿಸಲಾಗುವುದು; (ಸಂಪೂರ್ಣವಾದ ಮಾಹಿತಿ ನೀಡುವುದು | -ಬಂದಿದೆ-<br><br>ಕೋಲಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಪ್ರಸ್ತುತ 19 ಎಕರೆ ವಿಸ್ತೀರ್ಣವನ್ನು ಹೊಂದಿದ್ದು, ಸದರಿ ಜಾಗವು ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುವ ದೈನಂದಿನ ವಹಿವಾಟಿಗೆ ಅನುಗುಣವಾಗಿಲ್ಲದೇ ಇರುವುದರಿಂದ ಸ್ಥಳದ ಕೊರತೆ ಉಂಟಾಗಿರುತ್ತದೆ.<br><br>ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪಾರ ವಹಿವಾಟಿಗೆ ಅನುಗುಣವಾಗಿ ಪ್ರಾಂಗಣವನ್ನು ಹೊಂದಲು ಕೋಲಾರ ತಾಲ್ಲೂಕು ಕಲ್ಲಂಡೂರು ಗ್ರಾಮದ ಸ.ನಂ-87 ರಲ್ಲಿ 32.37 ಎಕರೆ ಮತ್ತು ವಕ್ಕಲೇರಿ ಹೋಬಳಿಯ ಕೋನಪುರ ಗ್ರಾಮದ ಸ.ನಂ.34 ರಲ್ಲಿ 27.10 ಎಕರೆ ಜಮೀನನ್ನು ಕೋಲಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಹಂಚಿಕೆ ಮಾಡಲು ಜಿಲ್ಲಾಧಿಕಾರಿಗಳ ಮೂಲಕ ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ. |
| ಆ) | ಈ ಜಿಲ್ಲೆಗೆ ಸಂಸ್ಕರಣಾ ಘಟಕ ಮತ್ತು ಶಿಥಲೀಕರಣ ಘಟಕ ಅವಶ್ಯಕವಾಗಿ ಬೇಕಾಗಿದ್ದು, ಈ ಘಟಕಗಳನ್ನು ನೀಡಲು ಸರ್ಕಾರ ಚಿಂತಿಸಿದೆಯೇ; ಇಲ್ಲದಿದ್ದಲ್ಲಿ ಯಾವ ಕಾಲಮಿತಿ ಯೊಳಗೆ ಈ ಘಟಕಗಳನ್ನು ಪೂರೈಸ ಲಾಗುವುದು; (ಸಂಪೂರ್ಣವಾದ ಮಾಹಿತಿ ನೀಡುವುದು) | ಕೋಲಾರ ತಾಲ್ಲೂಕಿನಲ್ಲಿ ತರಕಾರಿ ಮತ್ತು ಹೂ ಬೇಸಾಯ ಹೆಚ್ಚಾಗಿದ್ದು, ಸದರಿ ಉತ್ಪನ್ನ ಗಳು Perishable Commodities ಆಗಿರುವುದರಿಂದ, ಶೀತಲ ಗೃಹ ಸ್ಥಾಪನೆಯ ಅವಶ್ಯಕತೆ ಇರುವುದಿಲ್ಲ ಹಾಗೂ ಪ್ರಸ್ತುತ ಕೋಲಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಶಿಥಲೀಕರಣ ಘಟಕ ಸ್ಥಾಪಿಸಲು ಸ್ಥಳಾವಕಾಶವೂ ಸಹ ಇರುವುದಿಲ್ಲ.<br><br>ಟಮೋಟೋ ಹಾಗೂ ಇತರ ಹಣ್ಣುಗಳಿಗೆ Multi Commodity ಸಂಸ್ಕರಣಾ ಘಟಕ ಸ್ಥಾಪಿಸುವ ಅವಶ್ಯಕತೆ ಇರುತ್ತದೆ. ಆದರೆ, ಪ್ರಾಂಗಣದಲ್ಲಿ ಸ್ಥಳಾವಕಾಶದ ಲಭ್ಯತೆ ಇಲ್ಲದಿರುವುದರಿಂದ, ಸಂಸ್ಕರಣಾ ಘಟಕ ಸ್ಥಾಪಿಸಲು ಸಾಧ್ಯವಾಗಿರುವುದಿಲ್ಲ. |

ಇ) ಕೋಲಾರ ಎಪಿಎಂಸಿ ಮಾರುಕಟ್ಟೆಯಲ್ಲಿ ಮೂಲ ಸೌಕರ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಮೂಲಸೌಕರ್ಯಗಳ ಕೊರತೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣವಾದ ಮಾಹಿತಿ ನೀಡುವುದು)

ಕೋಲಾರ ಎಪಿಎಂಸಿ ಮಾರುಕಟ್ಟೆಯಲ್ಲಿ ಪ್ರಸ್ತುತ ಇರುವ 19 ಎಕರೆ ಜಾಗದಲ್ಲಿ ಈ ಕೆಳಕಂಡಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿರುತ್ತದೆ.

| ಕ್ರ.ಸಂ | ಮೂಲಭೂತ ಸೌಲಭ್ಯಗಳು | ಸಂಖ್ಯೆ |
|---|---|---|
| 1. | ಕುಡಿಯುವ ನೀರಿನ ಸೌಲಭ್ಯ | 05 |
| 2. | ರಸ್ತೆ ಮತ್ತು ಚರಂಡಿ | - |
| 3. | ಮುಚ್ಚು ಹರಾಜುಕಟ್ಟೆಗಳು | 19 |
| 4. | ಅಂಗಡಿ-ವ-ಗೋದಾಮುಗಳು | 28 |
| 5. | ರೈತಭವನ | 01 |
| 6. | ಉಪಹಾರ ಗೃಹ | 01 |
| 7. | ಶೌಚಾಲಯಗಳು | 03 |
| 8. | ಯು.ಜಿ.ಡಿ ಕೇಬಲ್ ವ್ಯವಸ್ಥೆ | 03 |
| 9. | RKVY ಗೋದಾಮುಗಳು | - |
| 10. | 04 ರಸ್ತೆಗಳಿಗೆ ಶೆಲ್ಟರ್ | - |
| 11. | ವಿದ್ಯುದ್ದೀಕರಣ | - |
| 12. | ಕಾಂಪೌಂಡ್ | - |
| 13. | ಬ್ಯಾಂಕ್-ಕಂ-ಅಂಚೆ ಕಚೇರಿ | - |

ವಾರ್ಷಿಕ ಕ್ರಿಯಾ ಯೋಜನೆಯಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸ್ವಂತ ನಿಧಿಯಿಂದ ಕಳೆದ ಮೂರು ವರ್ಷಗಳಲ್ಲಿ ಅಂದಾಜು ರೂ.390.77 ಲಕ್ಷಗಳ ಮೊತ್ತದಲ್ಲಿ ಚರಂಡಿ, ಹರಾಜುಕಟ್ಟೆ, ಕಲ್ವರ್ಟ್ ನಿರ್ಮಾಣ, ರಸ್ತೆಗಳಿಗೆ ಗಾಲ್‌ವಾಲ್ಯೂಮ್ ಶೀಟ್ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಪ್ರಸಕ್ತ 2025-26ನೇ ಸಾಲಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಅಂದಾಜು ರೂ.1.02 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಟೆಂಡರ್ ಕರೆಯಲು ಕ್ರಮವಹಿಸ ಲಾಗುತ್ತಿದೆ.

ಇದರೊಂದಿಗೆ, RIDF-29 ರಡಿ ವೇಮಗಲ್ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಸಿ.ಸಿ.ರಸ್ತೆ, ಆರ್.ಸಿ.ಸಿ ಚರಂಡಿ ನಿರ್ಮಾಣ ಹಾಗೂ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮುಚ್ಚು ಹರಾಜುಕಟ್ಟೆ ನಿರ್ಮಾಣ ಕಾಮಗಾರಿಯನ್ನು ರೂ. 118.68 ಲಕ್ಷಗಳ ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ.

**ಸಿಇ 123 ಎಂಆರ್‌ಇ 2026**

**(ಶಿವಾನಂದ ಎಸ್. ಪಾಟೀಲ)**
**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ**
**ಹಾಗೂ ಕೃಷಿ ಮಾರುಕಟ್ಟೆ ಸಚಿವರು**